# ಮಾಂಸಾಹಾರಿ ಸಸ್ಯ..!

ಮಾಂಸ ತಿನ್ನುವ ಸಸ್ಯಗಳಿವೆಯೆ?! ಅನುಮಾನ ಏಕೆ? ಈ ಲೇಖನ ಓದಿ ನೋಡಿ!

■ ಚಿತ್ರ-ಲೇಖನ: **ಪುಟ್ಟರಾಜು ಕೆ.**





ಮಳೆ ಕಾಡಾದ ಪಶ್ಚಿಮಘಟ್ಟದ ಉದ್ದಗಲಕ್ಕೂ ಅಸಂಖ್ಯ ಸಸ್ಯ ಪ್ರಭೇದಗಳಿವೆ. ಹೀಗೆಂದೇ ಪಶ್ಚಿಮ ಘಟ್ಟವನ್ನು ಪ್ರಪಂಚದ ಪ್ರಮುಖ ಅಗ್ರತಾಣಗಳಲ್ಲೊಂದು (ಹಾಟ್ ಸ್ಪಾಟ್) ಎಂದು ಪರಿಗಣಿಸಲಾಗಿದೆ. ಜೀವಜಾಲದ ಈ ತವರಿನಲ್ಲಿ ಸಸ್ಯ ಮತ್ತು ಕೀಟಗಳ ಸಂಬಂಧವೂ ವಿಶಿಷ್ಟವೇ. ಸಸ್ಯಗಳ ಬದುಕೂ ವೈವಿಧ್ಯಮಯ.

ಯಾವುದೇ ಸಸ್ಯ ಬದುಕಿ ಉಳಿಯಬೇಕಾದರೆ ಹಲವಾರು ಅಡೆ– ತಡೆಗಳನ್ನು ಎದುರಿಸಬೇಕಾಗುತ್ತದೆ. ಹಲವಾರು ವೇಷಗಳನ್ನು ಧರಿಸಬೇಕಾಗುತ್ತದೆ. ಪರಿಸರಕ್ಕೆ ಅನುಗುಣವಾಗಿ ಮಾರ್ಪಾಡು ಆಗಬೇಕಾಗುತ್ತದೆ. ನೀರಡಿಕೆ ಹಿಂಗಿಸಿಕೊಳ್ಳಲು ಮಂಜಿನ ಆಶ್ರಯ ಪಡೆಯಬೇಕಾಗುತ್ತದೆ. ವಂಶೋದ್ಧಾರಕ್ಕಾಗಿ ನೀರು, ಮಳೆ, ಗಾಳಿ, ಕೀಟಗಳಿಗೆ ಶರಣಾಗಬೇಕಾಗುತ್ತದೆ. ಕೆಲವು ಸಸ್ಯಗಳು ಲವಣಾಂಶವನ್ನು ಪಡೆಯಲು ಇತರ ಕೀಟಗಳಿಗೆ ಉರುಳು ಹಾಕಬೇಕಾಗುತ್ತದೆ. ಅಲ್ಲದೆ ಸಹಜವಾಗಿಯೇ ಮಾಂಸಾಹಾರಿ ಜೀವನಕ್ಕೆ ಮೊರೆ ಹೋಗಬೇಕಾಗುತ್ತದೆ! ಈ ಸಸ್ಯ– ಕೀಟಗಳ ಆಹಾರ ಸರಪಳಿ ಒಂದನ್ನೊಂದು ಅವಲಂಬಿಸಿದೆ.

**(8ನೇ ಪುಟ ನೋಡಿ)**